ಕಾರ್ಯಕ್ರಮವಾರು ವಿವರ ಈ ಕೆಳಕಂಡಂತಿದೆ:-

1)	ವಕ್ಫ್ ಸಂಸ್ಥೆಗಳಿಗೆ ದುರಸ್ತಿ, ನಿರ್ಮಾಣ ಹಾಗೂ ನವೀಕರಣಕ್ಕಾಗಿ ಸಹಾಯ ಧನ ರೂಪಾಯಿ	ರೂ.350.00 ಲಕ್ಷ
2)	ವಕ್ಫ್ ಮಂಡಳಿಗೆ ಉಸ್ತುವಾರಿ ಸಹಾಯ ಧನ	ರೂ.129.90 ಲಕ್ಷ
3)	ವಕ್ಫ್ ಆಸ್ತಿಗಳ ಸಮೀಕ್ಷೆ ಸಹಾಯ ಧನ	ರೂ. 37.00 ಲಕ್ಷ
4)	ಕರ್ನಾಟಕ ರಾಜ್ಯ ವಕ್ಫ್ ಪರಿಷತ್	ರೂ. 250.00 ಲಕ್ಷ
5)	ಕರ್ನಾಟಕ ರಾಜ್ಯ ವಕ್ಫ್ ಫೌಂಡೇಷನ್ ಮಹಿಳೆಯರ ಅಭಿವೃದ್ಧಿ ಸಹಾಯ ಧನ	ರೂ. 300.00 ಲಕ್ಷ
6)	ಕರ್ನಾಟಕ ರಾಜ್ಯ ಹಜ್ ಸಮಿತಿ	ರೂ. 40.00 ಲಕ್ಷ
7)	ವಕ್ಫ್ ಟ್ರಿಬ್ಯೂನಲ್	ರೂ. 60.00 ಲಕ್ಷ
	ಒಟ್ಟು	**ರೂ.1166.90 ಲಕ್ಷ**

ಇ) 2004-05ನೇ ಸಾಲಿನಲ್ಲಿ ಬೆಳ್ಳಾವಿ ವಿಧಾನಸಭಾ ಕ್ಷೇತ್ರಕ್ಕೆ ವಕ್ಫ್ ಸಂಸ್ಥೆಗಳ ದುರಸ್ತಿ, ನಿರ್ಮಾಣ ಕಾರ್ಯಕ್ರಮದಡಿಯಲ್ಲಿ ಜಾಮಿಯಾ ಮಸೀದಿ ಬೆಳ್ಳಾವಿಗೆ ರೂ.20,000-00 ಮಂಜೂರು ಮಾಡಲಾಗಿದೆ.

ಈ, ಉ) ಸಂಬಂಧಪಟ್ಟ ಸಂಸ್ಥೆಗಳಿಂದ ಕೋರಿಕೆ ಬಂದಲ್ಲಿ, ಅನುದಾನದ ಲಭ್ಯತೆಯನ್ನಾಧರಿಸಿ ಅಂತಹ ಸಂಸ್ಥೆಗೆ ಅನುದಾನ ಮಂಜೂರಾತಿಯನ್ನು ಪರಿಶೀಲಿಸಿ ಪರಿಗಣಿಸಲಾಗುವುದು.

2671 (3417) ಶ್ರೀ ಕ್ಯಾತ್‌ಸಂದ್ರ ಎನ್. ರಾಜಣ್ಣ (ಬೆಳ್ಳಾವಿ) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮನೆಗಳಿಗಾಗಿ ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಜಾರಿಗೊಳಿಸಲಾಗಿರುವ ಯೋಜನೆಗಳಾವುವು;

ಆ) ಕಳೆದ ಮೂರು ವರ್ಷಗಳಿಂದ ಈ ಯೋಜನೆಗಳಿಗಾಗಿ ನೀಡಿದ ಹಣವೆಷ್ಟು;

ಇ) ಬೆಳ್ಳಾವಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಈ ಯೋಜನೆಗಳಡಿಯಲ್ಲಿ ಎಷ್ಟು ಫಲಾನುಭವಿಗಳಿಗೆ ಎಷ್ಟು ಹಣ ಖರ್ಚು ಮಾಡಿದೆ?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಸಮಾಜ ಕಲ್ಯಾಣ ಇಲಾಖೆ :

ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಅಂಬೇಡ್ಕರ್ ವಸತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಪರಿಶಿಷ್ಟ ಜಾತಿಯರಿಗೆ ನಿರ್ಮಾಣ ಮಾಡುವ ಆಶ್ರಯ ಮನೆಗಳಿಗೆ ರೂ.10.000/–ಗಳ ಸಹಾಯಧನ ಸ್ವಂತ ವೆಚ್ಚದಲ್ಲಿ ನೀಡಲಾಗುವುದು. ಈ ಯೋಜನೆಯನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ಅನುಷ್ಠಾನಗೊಳಿಸಲಾಗುವುದು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ: ಪರಿಶಿಷ್ಟ ವರ್ಗದವರಿಗಾಗಿ ಅಂಬೇಡ್ಕರ್ ವಸತಿ ಯೋಜನೆಯನ್ನು ಜಾರಿಗೊಳಿಸಲಾಗಿದೆ.

ಆ) **ಸಮಾಜ ಕಲ್ಯಾಣ ಇಲಾಖೆ :** ಕಳೆದ 3 ವರ್ಷಗಳಿಂದ ಈ ಈ ಕೆಳಕಂಡಂತೆ ಹಣವನ್ನು ನೀಡಲಾಗಿದೆ.

ರೂ.ಲಕ್ಷಗಳಲ್ಲಿ.

ಕ್ರ.ಸಂ.	ಯೋಜನೆಯ ಹೆಸರು	2001–02	2002–03	2003–04
1.	ಅಂಬೇಡ್ಕರ್	35.00	25.00	27.00
2.	ಆಶ್ರಯ	31.00	26.79	20.00

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ :

ವರ್ಷ	ಭೌತಿಕ ಗುರಿ	ನೀಡಬೇಕಾದ ಒಟ್ಟು ಮೊತ್ತ	ಪ್ರತಿ ಮನೆಗೆ ರೂ.20,000 ರಂತೆ ನೀಡಿದ ಮೊತ್ತ
2001–02	5000	1000.00	1000.00
2002–03	5000	1000.00	1000.00
2003–04	5000	1000.00	418.54
2004–05	5000	1000.00	300.00

ಇ) ಬೆಳ್ಳಾವಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಈ ಯೋಜನೆಗಳ ಅಡಿಯಲ್ಲಿ ಈ ಕೆಳಕಂಡಂತೆ ಫಲಾನುಭವಿಗಳಿಗೆ ಹಣವನ್ನು ಖರ್ಚು ಮಾಡಲಾಗಿದೆ.

ರೂ.ಲಕ್ಷಗಳಲ್ಲಿ.

ವರ್ಷ	ಫಲಾನುಭವಿಗಳ ಸಂಖ್ಯೆ	ಖರ್ಚಾದ ಮೊತ್ತ
2001–02	42	8.20
2002–03	28	5.10
2003–04	26	3.00

<u>ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ</u> :

ಬೆಳ್ಳಾವಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಲ್ಲಿ ಪರಿಶಿಷ್ಟ ವರ್ಗದವರಿಗೆ ಅಂಬೇಡ್ಕರ್ ವಸತಿ ಯೋಜನೆಯಡಿ 96 ಮನೆಗಳು ನಿರ್ಮಾಣಕ್ಕಾಗಿ ರೂ.19.20 ಲಕ್ಷಗಳನ್ನು ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಬಿಡುಗಡೆ ಮಾಡಲಾಗಿದೆ.

2672 (1980) ಶ್ರೀ ಮಲ್ಲಿಕಾರ್ಜುನ್ ಸಿದ್ಧರಾಮಪ್ಪ ಖೂಬ (ಬಸವಕಲ್ಯಾಣ) :– ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರೇಷ್ಮೆ ಇಲಾಖೆ ವತಿಯಿಂದ ಯಾವ ಯಾವ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ ಹಾಗೂ ಹೊಸ ತಾಂತ್ರಿಕತೆಯನ್ನು ಮತ್ತು ಇದರ ಜ್ಞಾನವನ್ನು ರೈತರಿಗೆ ನೀಡಲಾಗುತ್ತಿದೆಯೇ;

ಆ) ರೇಷ್ಮೆ ಇಲಾಖೆಗೆ ಸಂಬಂಧಿಸಿದಂತೆ ಇಲಾಖೆ ಹೊಂದಿರುವ ಆಸ್ತಿ ವಿವರಗಳನ್ನು ಒದಗಿಸುವುದು;

ಇ) ಎಲ್ಲಾ ತಾಲ್ಲೂಕುಗಳಲ್ಲೂ ಕಾರ್ಯಾಲಯಗಳನ್ನು ತೆರೆಯಲಾಗಿದೆಯೇ ಹಾಗೂ ಎಲ್ಲಾ ಕಡೆಗಳಲ್ಲೂ ಇಲಾಖೆ ಸ್ವಂತ ಕಟ್ಟಡವನ್ನು ಹೊಂದಿರುವುದೇ (ವಿವರ ಒದಗಿಸುವುದು);

ಈ) ರೇಷ್ಮೆ ಗೂಡುಗಳನ್ನು ಖರೀದಿ ಮಾಡಲು ರೇಷ್ಮೆ ಕೃಷಿಕರಿಗೆ ಸರಿಯಾದ ಬೆಲೆ ಸಿಗುತ್ತಿಲ್ಲವೆಂದು ದೂರುಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಸಿ. ಚನ್ನಿಗಪ್ಪ (ರೇಷ್ಮೆ ಸಚಿವರು) :

ಅ) ರೇಷ್ಮೆ ಬೆಳೆಗಾರರ ಅಭಿವೃದ್ಧಿಗಾಗಿ ಸರ್ಕಾರವು ವಿಶೇಷ ಘಟಕ ಯೋಜನೆ ಗಿರಿಜನ ಉಪಯೋಜನೆ, ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ, ಜಿಲ್ಲಾ / ತಾಲ್ಲೂಕು ಪಂಚಾಯತ್